118

commencement ock

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ನಿರ್ದೇಶಕರು ನಗರ ಯೋಜನೆ, ಮಹದೇವಪುರ ವಲಯ, ಬೆಂಗಳೂರು.

ಸಂಖ್ಯೆ: ಬಿಬಿಎಂಪಿ/ನಯೋ/ಮವ/19/2015-16

ದಿನಾಂಕ: 23/06/2015

**'ಸೂಚನಾ ಪತ್ರ'**

ವಿಷಯ:- ಮಹದೇವಪುರ ವಲಯದ ವರ್ತೂರು ಹೋಬಳಿ, ವರ್ತೂರು ಗ್ರಾಮದ ಸರ್ವೆ ನಂ.193/4, ಖಾತಾ ಸಂಖ್ಯೆ:1443 (Ward No.149) ರ ಆಸ್ತಿಯಲ್ಲಿ ನಿರ್ಮಿಸುತ್ತಿರುವ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ಕೋರಿರುವ ಬಗ್ಗೆ.

ಉಲ್ಲೇಖ:-
1) ತಮ್ಮ ಅರ್ಜಿಯ ದಿನಾಂಕ:18/06/2015
2) ಕಟ್ಟಡ ಮಂಜೂರಾತಿ ಸಂಖ್ಯೆ:ಬಿಬಿಎಂಪಿ/ಮವ/ನಯೋ/ಎಲ್.ಪಿ.ನಂ.209/2014-15

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಹದೇವಪುರ ವಲಯದ ವರ್ತೂರು ಹೋಬಳಿ, ವರ್ತೂರು ಗ್ರಾಮದ ಸರ್ವೆ ನಂ.193/4, ಖಾತಾ ಸಂಖ್ಯೆ:1443 (Ward No.149) ರ ಪ್ರದೇಶದ ಸ್ವತ್ತಿನಲ್ಲಿ ನಿರ್ಮಿಸುತ್ತಿರುವ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ನೀಡುವಂತೆ ಉಲ್ಲೇಖ (1) ರ ಪತ್ರದಲ್ಲಿ ಕೋರಿದ್ದು, ಈ ಸಂಬಂಧ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲು ಈ ಕೆಳಕಂಡ ಶುಲ್ಕಗಳನ್ನು ಪಾವತಿಸಲು ಸೂಚಿಸಿದೆ.

**ಪ್ರಾರಂಭಿಕ ಪ್ರಮಾಣ ಪತ್ರದ ಶುಲ್ಕದ ವಿವರ**

ಕಟ್ಟಡದ ಪ್ಲಿಂತ್ ವಿಸ್ತೀರ್ಣ – 1540.00 ಚ.ಮೀ x ರೂ. 50.00 ಪ್ರತಿ ಚ.ಮೀ.ಗೆ = ರೂ. 77,000/-
(ರೂ. ಎಪ್ಪತ್ತೇಳು ಸಾವಿರ ರೂ.ಗಳು ಮಾತ್ರ)

ಸದರಿ ಮೊತ್ತವನ್ನು ಪಾವತಿಸಲು "ಆಯುಕ್ತರು ಬಿಬಿಎಂಪಿ" ರವರ ಪರವಾಗಿ ಡಿ.ಡಿ. ಪಡೆದು ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ.

ಸಹಾಯಕ ನಿರ್ದೇಶಕರು ನಗರ ಯೋಜನೆ
ಬೃ.ಬೆಂ.ಮ.ಪಾ. ಮಹದೇವಪುರ,
ಬೆಂಗಳೂರು-48.

AE 23/6/15

ರವರಿಗೆ,

M/s ARR Developers
Rep by Sri Y Amaranatha Reddy & Others,
Khatha No-1443, Sy No-193/4,
Varthur Village, Varthur Hobli,
Bangalore-43.

120

commencement certificate

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ನಿರ್ದೇಶಕರು ನಗರ ಯೋಜನೆ, ಮಹದೇವಪುರ ವಲಯ, ಬೆಂಗಳೂರು.

ಸಂಖ್ಯೆ: ಬಿಬಿಎಂಪಿ/ನಯೋ/ಮವ/30/2015-16

ದಿನಾಂಕ: 11/08/201

## 'ಪ್ರಾರಂಭಿಕ ಪ್ರಮಾಣ ಪತ್ರ'

ವಿಷಯ:- ಸಂಖ್ಯೆ: ಬಿಬಿಎಂಪಿ/ಮವ/ನಯೋ/ಎಲ್.ಪಿ/209/2014-15 ದಿ:03/02/2015 ರಂದು ನಕ್ಷೆ ಪರವಾನಿಗೆ ಪಡೆದಿರುವ ವಸತಿ ಸಮುಚ್ಚಯ ಕಟ್ಟಡ ನಿರ್ಮಾಣವನ್ನು ಕೈಗೊಳ್ಳಲು ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಬಗ್ಗೆ.

ಉಲ್ಲೇಖ:- 1) ತಮ್ಮ ಮನವಿ ಪತ್ರದ ದಿನಾಂಕ:18/06/2015

2) ಈ ಕಛೇರಿ ಸೂಚನಾ ಪತ್ರ ದಿನಾಂಕ:23/06/2015

*****

ಬೆಂಗಳೂರು ಪೂರ್ವ ತಾಲ್ಲೂಕು ವರ್ತೂರು ಹೋಬಳಿ, ವರ್ತೂರು ಗ್ರಾಮದ ಸರ್ವೆ ನಂ.193/4, ಖಾತಾ ಸಂಖ್ಯೆ:1443 ಆಸ್ತಿಯನ್ನು ದಿನಾಂಕ:23/06/2015 ರಂದು ಸಹಾಯಕ ನಿರ್ದೇಶಕರು, ನಗರ ಯೋಜನೆ ಮಹದೇವಪುರ ವಲಯ ರವರ ಸಹಾಯಕ ಅಭಿಯಂತರರೊಡನೆ ಪರಿವೀಕ್ಷಣೆ ಮಾಡಲಾಗಿ ತಳ ಅಂತಸ್ತಿನಲ್ಲಿ ನಿರ್ಮಿಸಿರುವ ಸ್ಥಂಭಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಸಂಖ್ಯೆ:ಬಿಬಿಎಂಪಿ/ಮವ/ನಯೋ/ಎಲ್.ಪಿ/209/2014-15 ದಿನಾಂಕ:03/02/2015 ರಂದು ಮಂಜೂರಾಗಿರುವ ನಕ್ಷೆಗೆ ಹೋಲಿಕೆ ಮಾಡಲಾಗಿ ಈ ನಡುಭಾಗಗಳು ಮಂಜೂರಾತಿ ನೀಡಿರುವ ನಕ್ಷೆಯಂತೆ ಬೈಲಾ ಪ್ರಕಾರ ಇರುವುದು ಕಂಡುಬಂದಿದೆ. ಪ್ರಾರಂಭಿಕ ಪ್ರಮಾಣ ಪತ್ರ ಪಡೆಯಲು ಪಾವತಿಸಬೇಕಾದ ಶುಲ್ಕ ರೂ.77,000/- ಗಳನ್ನು ಪಾವತಿಸಲು ಉಲ್ಲೇಖ (2) ರಲ್ಲಿ ತಿಳಿಸಿದ್ದು ತಾವು ರೂ.77,000/- ಡಿ.ಡಿ.ಸಂಖ್ಯೆ:927216 ದಿ:30/07/2015 ರಲ್ಲಿ ಪಡೆದಿರುವ ಡಿ.ಡಿ.ಗಳನ್ನು ದಿನಾಂಕ:11/08/2015 ರಲ್ಲಿ ಈ ಕಛೇರಿಗೆ ಸಲ್ಲಿಸಿರುತ್ತೀರಿ. ಸದರಿ ಮೊತ್ತವನ್ನು ದಿನಾಂಕ:11/08/2015 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬೊಕ್ಕಸಕ್ಕೆ ಪಾವತಿಸಲಾಗಿದೆ.

ಆದ್ದರಿಂದ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಕಾಮಗಾರಿಯನ್ನು ಮುಂದುವರಿಸಲು ಈ ಮೂಲಕ ಅನುಮೋದನೆ ನೀಡಲಾಗಿದೆ.

1. ಯಾವುದೇ ಬದಲಾವಣೆಗಳನ್ನಾಗಲೀ, ಮಾರ್ಪಾಡುಗಳನ್ನಾಗಲೀ ಅಥವಾ ಉಲ್ಲಂಘನೆಗಳನ್ನಾಗಲೀ ಮಾಡದೆ ಕಟ್ಟುನಿಟ್ಟಾಗಿ ಮಂಜೂರಾತಿ ನೀಡಿರುವ ನಕ್ಷೆಯ ಮತ್ತು ಕಟ್ಟಡ ಉಪವಿಧಿಗಳ ಪ್ರಕಾರವೇ ಕಾಮಗಾರಿಯನ್ನು ಕೈಗೊಳ್ಳತಕ್ಕದ್ದು.
2. ಕಾಮಗಾರಿಯು, ಅಡಿಪಾಯದ ಅಥವಾ ಸ್ಥಂಭಗಳ ಆಧಾರ ಅಥವಾ ಸ್ಥಂಭಗಳ ಸ್ಥಿರೀಕರಣ ಕಾರ್ಯವು ಪೂರ್ಣಗೊಂಡ ಹಂತವನ್ನು ತಲುಪಿದಾಗ ನಿರ್ಮಾಣವನ್ನು ಮಂಜೂರಾತಿ ನೀಡಿರುವ ನಕ್ಷೆಯ ಮತ್ತು ಕಟ್ಟಡ ಉಪವಿಧಿಗಳ ಪ್ರಕಾರ ಕೈಗೊಂಡಿರುವ ಬಗ್ಗೆ ಕಾಮಗಾರಿಯನ್ನು ಪರಿವೀಕ್ಷಣೆ ಮತ್ತು ಶೋಧನೆ ಮಾಡಲು ನೆರವು ನೀಡುವ ದೃಷ್ಟಿಯಿಂದ ಮಹಾನಗರ ಪಾಲಿಕೆಗೆ ಸಂದೇಶವನ್ನು ಕಳುಹಿಸತಕ್ಕದ್ದು ಹಾಗೂ ಕಟ್ಟಡ ಪೂರ್ಣಗೊಂಡ ನಂತರ ಸ್ವಾಧೀನಾನುಭವ ಪತ್ರವನ್ನು ಪಡೆಯಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸಂದೇಶವನ್ನು ಕಳುಹಿಸತಕ್ಕದ್ದು ಹಾಗೂ ಸ್ವಾಧೀನಾನುಭವ ಪತ್ರವನ್ನು ಪಡೆಯುವುದು.
3. ಕಾಲಕಾಲಕ್ಕೆ ಸಂದರ್ಭಾನುಸಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನೀಡುವ ಸೂಚನೆಗಳನ್ನು ಪಾಲಿಸತಕ್ಕದ್ದು ಹಾಗೂ ಮಂಜೂರಾತಿ ಸಮಯದಲ್ಲಿ ನೀಡಿರುವ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.

ಕಛೇರಿ ಟಿಪ್ಪಣಿಯು
ಜಂಟಿ ಆಯುಕ್ತರು (ಮಹದೇವಪುರ ವಲಯ) ರವರಿಂದ
ಅನುಮೋದಿಸಲ್ಪಟ್ಟಿದೆ.

ಸಹಾಯಕ ನಿರ್ದೇಶಕರು ನಗರ ಯೋಜನೆ
ಬೃ.ಬೆಂ.ಮ.ಪಾ., ಮಹದೇವಪುರ
ಬೆಂಗಳೂರು-48

ರವರಿಗೆ,

M/s ARR Developers
Rep by Sri Y Amaranatha Reddy & others
Khatha No.1443, Survey No.193/4
Varthur Village
Bangalore.

1.